ಶ್ರೀ ಪಿ. ರಾಂದೇವ್.--ಆ ರೀತಿ ಆಪಾದನೆ ಮಾಡಬೇಕಾದರೆ ಮೊದಲೇ ನೋಟೀಸ್ ಕೊಡಬೇಕು.

ಡಾ। ವಿ. ಎಸ್. ಆಚಾರ್ಯ.-- ಅವರು ವಿಷಯ ಗೊತ್ತಿಲ್ಲದೆ ಮಾತನಾಡುತ್ತಿದ್ದಾರೆ.

ಉಪಾಧ್ಯಕ್ಷರು.-- ಅವರಿಗೆ ಅರ್ಥವಾಗಿಲ್ಲವೋ, ನಿಮಗೆ ಅರ್ಥವಾಗಿಲ್ಲವೋ ಗೊತ್ತಿಲ್ಲ; ನನಗಂತೂ ಅರ್ಥವಾಗಿಲ್ಲ.

ಡಾ। ವಿ. ಎಸ್. ಆಚಾರ್ಯ.-- ಅರ್ಥಮಾಡಿ ಹೇಳುವುದಕ್ಕೆ ಅವಕಾಶ ಕೊಡುತ್ತಿಲ್ಲವಲ್ಲ.

ಉಪಾಧ್ಯಕ್ಷರು.—ಆ ರೀತಿ ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ಪ್ರಶ್ನೋತ್ತರ ಆದಮೇಲೆ ರೂಲ್ 334ಕ್ಕೆ ಸಂಬಂಧಪಟ್ಟ ವಿಚಾರಗಳನ್ನು ತೆಗೆದುಕೊಳ್ಳುತ್ತೇನೆ. ಆದರಲ್ಲಿ ರೂಲ್ 68 ಬೇಗೆ ಬರುತ್ತದೆ ? ಅದು ಆಜೆಂಡಾದಲ್ಲಿ ಬರಬೇಕಾಗುತ್ತದೆ : ಮತ್ತು ಅದು ಸಭೆ ಮುಕ್ತಾಯವಾಗುವುದಕ್ಕೆ ಒಂದು ಗಂಟೆ ಮುಂಚೆ ಪ್ರಸ್ತಾಪಕ್ಕೆ ಬರುತ್ತದೆ. ಅದನ್ನು 334ಕ್ಕೆ ಏತಕ್ಕೆ ಕನ್‌ವರ್ಟ್ ಮಾಡುತ್ತೀರಿ?

ಡಾ। ವಿ. ಎಸ್. ಆಚಾರ್ಯ.—ಇಲ್ಲ. ನಾನು ಇದನ್ನು ರೂಲ್ 68ರ ಪ್ರಕಾರ....

ಉಪಾಧ್ಯಕ್ಷರು.— ಆದಕ್ಕೋಸ್ಕರ ದಯವಿಟ್ಟು ನನ್ನ ಛೇಂಬರಿಗೆ ಬನ್ನಿ. ಎಷ್ಟು ಬೇಗ ಅದಕ್ಕೆ ಅವಕಾಶ ಮಾಡಿಕೊಡಬಹುದೋ ಅಷ್ಟು ಬೇಗ ಮಾಡಿಕೊಡುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ.—25-3-84ರಂದು ಹಿರಿಯೂರು ತಾಲ್ಲೂಕಿನ ವಾಣಿವಿಲಾಸ ಸಾಗರದಲ್ಲಿ ರಾಜಕೀಯ ಪಕ್ಷದ ಸಮ್ಮೇಳನದ ವಿಷಯದಲ್ಲಿ ಭಾರೀ ಹೊಡೆದಾಟ ನಡೆದು ಕೆಲವು ಮಹಿಳೆಯರಿಗೆ ಪೆಟ್ಟು ಬಿದ್ದು ಗೊಂದಲದಲ್ಲಿ ಪರಿಸಮಾಪ್ತಿಯಾಗಿದ್ದ ವಿಷಯ ಆ ಭಾಗದ ಸಾರ್ವಜನಿಕರಿಗೆ ಭಂಗ ಉಂಟುಮಾಡಿದೆ. ರಾಜ್ಯದಲ್ಲಿ ನಡೆಯುವ ಸಾರ್ವಜನಿಕಸಭೆ, ಸಮಾರಂಭಗಳಲ್ಲಿ ಇಂಥ ಘಟನೆಗಳು ನಡೆಯದಂತೆ ಸರ್ಕಾರ ಸೂಕ್ತ ಮುಂಚಾಗರೂಕತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಇದರ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡಬೇಕು ಮತ್ತು ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಭರವಸೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಅದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ.

Sri M. Mahadev.-- Immediate steps to be taken to stop smuggling of serviceable bullocks, milch cows and calves and also slaughtering of cows illegally in the State as per instructions given by the Prime Minister of India.

ಶ್ರೀ ಎ. ಲಕ್ಷ್ಮೀಸಾಗರ್.-- ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಂ. ಮಹಾದೇವ್.— ಇದು ಬಹಳ ಸೀರಿಯಸ್ ವಿಚಾರ. ಒಳ್ಳೊಳ್ಳೆಯ ಹಸುಗಳು ಹೋಗುತ್ತಿವೆ. ದಿನಕ್ಕೆ ಸಾವಿರಾರು ದನಗಳನ್ನು ಕತ್ತರಿಸುತ್ತಿದ್ದಾರೆ. ಈ ರೀತಿ ಎಷ್ಟು ದಿನಗಳಿಂದ ಕತ್ತರಿಸುತ್ತಿದ್ದಾರೆ ? ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಬಹಳ ಹಗುರವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದರೆ ಏನು ಅರ್ಥ ? ನಾವು ಇದನ್ನು ಇನ್ನು ಯಾವ ರೀತಿ ಪ್ರಸ್ತಾಪ ಮಾಡಬೇಕು?

ಶ್ರೀ ಎ. ಲಕ್ಷ್ಮೀಸಾಗರ್.-- ಶ್ರೀ ಮಹಾದೇವ್ ಅವರು ಯಾವಾಗ ರುದ್ರಾವತಾರ ತಾಳುತ್ತಾರೆಂದು ಗೊತ್ತಿಲ್ಲ. ಒಂದು ಸಾರಿ ಸೌಮ್ಯವಾಗಿರುತ್ತಾರೆ ; ಒಂದು ಸಾರಿ ಸೌಜನ್ಯವಾಗಿರುತ್ತಾರೆ. ಆದರೆ ಒಂದೊಂದು ಸಾರಿ ರುದ್ರಾವತಾರ ತಾಳುತ್ತಾರೆ. ಅವರು ರುದ್ರಾವತಾರ ತಾಳಿದಾಗ ಸರಿಯಾದ ಉತ್ತರ ಹೇಳಿದರೂ ಅದು ಅವರ ಮನಸ್ಸಿಗೆ ಹೋಗುವುದಿಲ್ಲ. ಈ ರೀತಿ ಆಗುತ್ತಿದೆ, ಇದು ಕಾನೂನಿಗೆ ವಿರುದ್ಧವಾಗಿದೆ, ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಂದು ಕೇಳಿದರು. ಅದಕ್ಕೆ ನಾನು ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇನೆಂದು ಹೇಳಿದ್ದೇನೆ. ಇದಕ್ಕಿಂತ ಪರಿಪೂರ್ಣವಾದ ಉತ್ತರ ನನ್ನಲ್ಲಿ ಇಲ್ಲ. ಎರಡನೆಯದಾಗಿ ಅಲ್ಲಿ ಏನೇನು ನಡೆಯುತ್ತಿದೆ ಎಂದು ಕೇಳಿದ್ದಾರೆ. ಈ ಬಗ್ಗೆ ನಾನು ವರದಿ ತರಿಸಿ ಪೂರ್ಣ ವಿಚಾರ ತಿಳಿಸುತ್ತೇನೆ.

ಹೊಸದುರ್ಗದಲ್ಲಿ ಸಿಮೆಂಟ್ ಕಾರ್ಖಾನೆಯಿಂದ ತೆಂಗಿನ ತೋಟಕ್ಕೆ ಆಗುವ ಹಾನಿ.

ಶ್ರೀ ಜಿ. ಬಸಪ್ಪ.-- ಸ್ವಾಮಿ, ಹೊಸದುರ್ಗ ತಾಲ್ಲೂಕಿನಲ್ಲಿ ಸುಮಾರು ಆರೇಳು ಸಿಮೆಂಟ್ ಫ್ಯಾಕ್ಟರಿಗಳನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರದವರು ಲೈಸೆನ್ಸ್ ಕೊಟ್ಟಿದ್ದಾರೆ. ಅದರ ಪರಿಣಾಮವಾಗಿ ಆದರ ಸುತ್ತಮುತ್ತ ಇರತಕ್ಕ ಮುತ್ತೋಡು ಮತ್ತು ಶ್ರೀರಾಂಪುರ ಹೋಬಳಿಯ ರೈತರಿಗೆ ಕಳವಳ ಉಂಟಾಗಿದೆ. ಆ ಸಿಮೆಂಟ್ ಫ್ಯಾಕ್ಟರಿಯಿಂದ ಆಗಿರತಕ್ಕ ಪರಿಣಾಮವನ್ನು ಕಂಡಿರತಕ್ಕವರಿಗೆ ನಮ್ಮ ಪರಿಸರವೂ ಹಾಳಾಗಿ ತೆಂಗಿನ ತೋಟಕ್ಕೆ ಲುಕ್ಸಾನಾಗುತ್ತದೆ ಎಂಬ ಕಳವಳ ಉಂಟಾಗಿದೆ. ಇದನ್ನು ತಡೆ

ಯುವುದಕ್ಕೆ ಜನರು ವಿದ್ಯುಚ್ಛಕ್ತಿ ಸರಬರಾಜು ಮಾಡುವ ಕೆಲವು ಸಿಮೆಂಟ್ ಕಂಬಗಳನ್ನು ಕಿತ್ತರು. ಟೆಲಿಫೋನ್ ಕಂಬಗಳನ್ನು ಕಿತ್ತರು, ಕಾರ್ಖಾನೆ ನಿರ್ಮಾಣವಾಗತಕ್ಕ ಜಾಗದಲ್ಲಿದ್ದ ನಾಮಫಲಕವನ್ನು ಕಿತ್ತು ಸುಟ್ಟರು. ಆದರ ಪರಿಣಾಮವಾಗಿ ಪೋಲೀಸ್ ಇಲಾಖೆಯಲ್ಲಿ ಕೇಸ್ ದಾಖಲಾಗಿದೆ. ಈಗ ಪೋಲೀಸ್ ಕಾವಲಿಟ್ಟಿದ್ದಾರೆ. ಆದ್ದರಿಂದ ಅಲ್ಲಿ ಸಿಮೆಂಟ್ ಕಾರ್ಖಾನೆ ಆಗದಂತೆ ನೋಡಿಕೊಂಡು ರೈತರಿಗೆ ಉಂಟಾಗಿರತಕ್ಕ ಕಳವಳ ಮತ್ತು ತೊಂದರೆಯನ್ನು ಪರಿಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಎಕ್ಷ್ಮೀಸಾಗರ್.–ಹೊಸದುರ್ಗದಲ್ಲಿ ಸಿಮೆಂಟ್ ಫ್ಯಾಕ್ಟರಿ ಹಾಕುವುದರಿಂದ ಮುತ್ತೋಡು ಮತ್ತು ಶ್ರೀರಾಮಪುರ ಹೋಬಳಿಯ ಜನರಿಗೆ ತೊಂದರೆಯಾಗುತ್ತದೆ, ತೆಂಗಿನ ಮರಗಳಿಗೆ ತೊಂದರೆಯಾಗಿ ನೈಸರ್ಗಿಕ ಮಾಲಿನ್ಯ ಉಂಟಾಗಿದೆ ಎಂದು ಹೇಳಿದ್ದಾರೆ.

ಶ್ರೀ ಜಿ. ಬಸಪ್ಪ.— ಈಗ ತೊಂದರೆಯಾಗಿಲ್ಲ. ಮುಂದೆ ಆಗುತ್ತೆ.

ಶ್ರೀ ಎ. ಲಕ್ಷ್ಮೀಸಾಗರ್.— ಈಗ ಆಗಿಲ್ಲವಲ್ಲ. ಒಳ್ಳೆಯದಾಯಿತು. ಈ ರೀತಿ ಆಗಬಾರದು ಎನ್ನುವುದಕ್ಕೆ ಕಾನೂನುಗಳಿವೆ. ಆದರ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಸ್ಥಳೀಯ ಅಧಿಕಾರಿಗಳಿಗೆ ತಿಳಿಸುವುದಕ್ಕೆ ಮೊದಲು ನಾನು ಅಲ್ಲಿಂದ ವರದಿ ತರಿಸಿಕೊಂಡು ಪರಿಸ್ಥಿತಿ ಏನಿದೆ ಎಂಬುದನ್ನು ತಿಳಿದುಕೊಳ್ಳುತ್ತೇನೆ. ವರದಿ ತರಿಸಿಕೊಂಡು ನೈಸರ್ಗಿಕ ಮಾಲಿನ್ಯ ಉಂಟಾಗತಕ್ಕ ಸಂದರ್ಭ ಇದ್ದರೆ ಅದನ್ನು ತಡೆಯುವುದಕ್ಕೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಎನ್. ನಾಯಕ್.— ಅಧಿಕಾರಿಗಳಿಂದ ವರದಿ ಬರಲೇಬೇಕು. ಇಲ್ಲದಿದ್ದರೆ ನಿಮಗೆ ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.— ಯಾವ ಜಾಗದಲ್ಲಿ ಸಿಮೆಂಟ್ ಫ್ಯಾಕ್ಟರಿ ಹಾಕಬೇಕೆಂದಿದ್ದಾರೋ ಆ ಜಾಗವನ್ನು ಬದಲಾವಣೆ ಮಾಡಿದರೆ ಈ ಪರಿಸ್ಥಿತಿ ಉದ್ಭವವಾಗುವುದಿಲ್ಲ ಎಂಬುದು ರೈತರ ಅಭಿಪ್ರಾಯ. ಅದು ನನ್ನ ತಾಲ್ಲೂಕಿನ ಪಕ್ಕದಲ್ಲಿರತಕ್ಕ ತಾಲ್ಲೂಕು. ಅಮ್ಮಸಂದ್ರದಲ್ಲಿ ಸಿಮೆಂಟ್ ಫ್ಯಾಕ್ಟರಿಯಾದ ಮೇಲೆ ಸುಮಾರು ತೆಂಗಿನ ತೋಟಗಳು ಹೋಗಿವೆ. ಹೊಸದುರ್ಗ, ಚಿಕ್ಕನಾಯ್ಕನಹಳ್ಳಿ, ತಿಪಟೂರು ಮತ್ತು ಅರಸೀಕೆರೆ ಪ್ರದೇಶಗಳಲ್ಲಿ ಪ್ರಮುಖವಾದ ಬೆಳೆ ತೆಂಗಿನ ಬೆಳೆ. ಆ ಭಾಗದಲ್ಲಿ ಕೆಲವು ಸಣ್ಣ ಫ್ಯಾಕ್ಟರಿಗಳಿಗೆ ಮತ್ತು ದೊಡ್ಡ ಫ್ಯಾಕ್ಟರಿಗೆ ಅವಕಾಶ ಕೊಟ್ಟಿದ್ದಾರೆ. ಜಾಗ ಬದಲಾವಣೆ ಮಾಡಿದರೆ ಈ ಅನಾಹುತಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಸ್ಥಳಾಂತರಿಸಬೇಕು ಎಂದು ಹೇಳುತ್ತಾರೆ. ಕಾನೂನು ಪ್ರಕಾರ ನೋಡುತ್ತೇನೆ ಎಂದು ಹೇಳಿದರೆ ಆಗುವುದಿಲ್ಲ. ಈ ಸಂದರ್ಭದಲ್ಲಿ ಕೈಗಾರಿಕಾ ಮಂತ್ರಿಗಳಿದ್ದಿದ್ದರೆ ಚೆನ್ನಾಗಿತ್ತು. ಆದ್ದರಿಂದ ಸರ್ಕಾರದವರು ಈ ಬಗ್ಗೆ ಗಮನ ಹರಿಸಿ ಜಾಗ ಬದಲಾವಣೆ ಮಾಡತಕ್ಕದ್ದು ಒಳ್ಳೆಯದು. ಇಲ್ಲದೇಹೋದರೆ ಬಹಳ ಅನಾಹುತವಾಗುತ್ತದೆಯೆಂಬುದು ರೈತರ ಕಳವಳ.

ಶ್ರೀ ಕೆ. ರಾಮಭಟ್.— ದಿನಾಂಕ 21–3–84ರಂದು ವಿದ್ಯುಚ್ಛಕ್ತಿ ಮಂಡಳಿಯ ಪೂರ್ವ ವಿಭಾಗದ ಕಚೇರಿಯ ಮುಂದೆ ಮಂಡಳಿಯ ನೌಕರರು ವಿಭಾಗೀಯ ಅಧಿಕಾರಿಯನ್ನು ಸುತ್ತಿಕೊಂಡು ಗಲಾಟೆ ಮಾಡಿದ್ದಾರೆ. ವೈದ್ಯಕೀಯ ಸೌಲಭ್ಯ ಸರಿಯಾಗಿ ಸಿಗಲಿಲ್ಲ ಎಂದು ಘೇರಾವೊ ಮಾಡುತ್ತಿದ್ದರೆಂದು ಗೊತ್ತಾಯಿತು. ಪೂರ್ವ ವಿಭಾಗದಲ್ಲಿ ಒಂದು ತಿಂಗಳಲ್ಲಿ ಮೂರು ಲಕ್ಷ ರೂಪಾಯಿಗಳಷ್ಟು ವೈದ್ಯಕೀಯ ಸೌಲಭ್ಯಕ್ಕೆ ಖರ್ಚಾಗುತ್ತದೆ ಎಂದು ತಿಳಿದುಬಂತು. ಒಂದು ವಿಭಾಗದಲ್ಲಿ ಇಷ್ಟು ಖರ್ಚಾದರೆ ಇಡೀ ರಾಜ್ಯದಲ್ಲಿ ಎಷ್ಟಾಗಬಹುದು ? ವೈದ್ಯಕೀಯ ಸೌಲಭ್ಯದ ಹೆಸರಿನಲ್ಲಿ ಮಂಡಳಿಯ ಹಣ ಪೋಲಾಗುತ್ತಿದೆ; ಸುಲಿಗೆಯಾಗುತ್ತಿದೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ ? ವ್ಯಾಪಕ ಪ್ರಮಾಣದಲ್ಲಿ ಸರ್ಕಾರಿ ಹಣ ಪೋಲಾಗುತ್ತಿದೆ. ವೈದ್ಯಕೀಯ ಸೌಲಭ್ಯದ ಹೆಸರಿನಲ್ಲಿ ಹಣ ಪೋಲಾಗುತ್ತಿರುವುದನ್ನು ತಪ್ಪಿಸಲು ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರು ಹೇಳಿದ್ದು ಏನು ಎಂಬುದನ್ನು ವಿಚಾರಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ವರದಿ ತರಿಸಿ ನಂತರ ಕ್ರಮ ತೆಗೆದುಕೊಳ್ಳತಕ್ಕ ಕೆಲಸ ಮಾಡುತ್ತೇವೆ ಎಂಬ ಮಾತನ್ನು ಹೇಳುತ್ತೇನೆ.

ಶ್ರೀ ಪಿ. ರಾಂದೇವ್.— ಸನ್ಮಾನ್ಯ ಅಧ್ಯಕ್ಷರೆ, ಶಾಸಕರು ಮತ್ತು ಶಾಸಕರು ನಡೆಸತಕ್ಕ ಸಂಸ್ಥೆಗಳು ಮಾದರಿಯಾಗಿರಬೇಕು ಎಂಬುದು ಎಲ್ಲರೂ ಒಪ್ಪತಕ್ಕ ವಿಷಯ. 1980ರಲ್ಲಿ ಶಾಸಕರೆಲ್ಲಾ....

ಉಪಾಧ್ಯಕ್ಷರು.— ರಾಂದೇವ್ ಅವರೆ, ಸ್ವಲ್ಪ ಇರಿ. ಶ್ರೀಯುತರಾದ ಶಿವಮೂರ್ತಿ, ರಾಮಪ್ಪ ಮತ್ತು ಸ್ವಾಮಿರಾವ್ ಅವರು ಸಹಿ ಮಾಡಿರುವ ನೋಟೀಸ್ ಬಂದಿದೆ. ಅವರು ಪ್ರಸ್ತಾಪ ಮಾಡಿದ ಮೇಲೆ ತಾವು ಪ್ರಸ್ತಾಪಮಾಡಿ,

ಶ್ರೀ ಎಂ. ರಾಮಪ್ಪ.—ಈಗ ಸ್ವಾಮಿರಾವ್‌ಅವರು ಮಾತನಾಡುತ್ತಾರೆ.

ಶ್ರೀ ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೇ, ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ತಮ್ಮ ಹಕ್ಕನ್ನು ಚಲಾಯಿಸುವುದಕ್ಕೋಸ್ಕರ ಹಸ್ತಪತ್ರಿಕೆ, ಪೋಸ್ಟರುಗಳನ್ನು ಅಂಟಿಸುತ್ತಿರಬೇಕಾದರೆ ಅವರನ್ನು ಪೋಲೀಸರು ಹೊಡೆದು ಚಿತ್ರಹಿಂಸೆ ನೀಡಿದ್ದಾರೆ. ಇದರ ಜೊತೆಗೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಭ್ರಷ್ಟಾಚಾರ, ಅತ್ಯಾಚಾರ ಮತ್ತು ಅನಾಚಾರ ಹೆಚ್ಚಾಗಿದೆ. ಜಾತೀಯತೆ ನಡೆಯುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಉದ್ಯೋಗ ಕೊಟ್ಟಿರುವುದರಲ್ಲಿಯೂ ಜಾತೀಯತೆ ನಡೆದಿದೆ. ಈ ಬಗ್ಗೆ ನಾವು ಸರ್ಕಾರಕ್ಕೆ ತಿಳುವಳಿಕೆ ಕೊಡುತ್ತಿದ್ದೇವೆ.

## ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದಿರತಕ್ಕ ಅವ್ಯವಹಾರ

ಶ್ರೀ ಕೆ. ಶಿವಮೂರ್ತಿ.—ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದಿರತಕ್ಕ ಅವ್ಯವಹಾರದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನೋಟೀಸ್ ಕಳುಹಿಸಿದ್ದೆವು. ಅದು ಚರ್ಚೆಗೆ ಬರಲಿಲ್ಲ. ಆದ್ದರಿಂದ 334ರಲ್ಲಿ ನೋಟೀಸ್ ಕಳುಹಿಸಿದ್ದೇವೆ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಹರಿಜನ ಗಿರಿಜನರಿಗೆ ಹಲವಾರು ಹುದ್ದೆಗಳನ್ನು ಮೀಸಲಾಗಿಡಲಾಗಿದೆ. ಆದರೆ ಈ ಮೀಸಲಿಟ್ಟಿರತಕ್ಕ ಹುದ್ದೆಗಳನ್ನು ಬೇರೆಯವರಿಗೆ ಕೊಟ್ಟಿದ್ದಾರೆ. ಸೀನಿಯರ್ ಟೆಕ್ನಿಕಲ್ ಅಸಿಸ್ಟೆಂಟ್, ನ್ಯಾಷನಲ್ ಸೀಡ್ಸ್ ಪ್ರಾಜೆಕ್ಟ್-2, ಈ ಹುದ್ದೆಗಳು ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ರಿಸರ್ವ್ ಮಾಡಿರತಕ್ಕ ಹುದ್ದೆಗಳು ; ರಾಮಪ್ರಸನ್ನ ಎಂಬುವರು ಪಿ.ಎಚ್.ಡಿ. ಮಾಡಿದ್ದರೂ ಅವರಿಗೆ ಆ ಹುದ್ದೆಯನ್ನು ಕೊಡದೆ ವೈಸ್ ಚಾನ್ಸಲರ್‌ಗೆ ಸಂಬಂಧಿಕರಾಗಿರತಕ್ಕ ಪೃಥ್ವಿರಾಜ್ ಎಂಬುವವರನ್ನು ನೇಮಿಸಿದ್ದಾರೆ. ನ್ಯಾಷನಲ್ ಸೀಡ್ಸ್ ಪ್ರಾಜೆಕ್ಟ್-2 ರಲ್ಲಿ ರಿಸರ್ಚ್ ಆಫೀಸರ್ ಹುದ್ದೆಗೆ ವೈಸ್ ಚಾನ್ಸಲರ್ ಅವರ ಸಂಬಂಧಿಕರಾದ ಜಿ. ವಿ. ಜಗದೀಶ್ ಎಂಬುವರನ್ನು ನೇಮಿಸಿದ್ದಾರೆ. ಪ್ರೊಫೆಸರ್ ಹುದ್ದೆಗೆ ಡಾಕ್ಟರ್ ಸಿಂಗ್ಲಾಚಾರ್ ಎಂಬುವರನ್ನು ಅಡ್ವರ್ಟೈಸ್ ಮಾಡದೆ.....

Sri A. Lakshmi Sagar.—I am on a point of order. Under 334 the matters that can be brought have been explained time and again. Only matters of urgent public importance which require the immediate attention of the Government must be raised and you will kindly allow them to be raised, but now the honourable member is pointing about the difficulties in the matter of promotion, emoluments payable to them and all that. They may not find place here.

Sri. K. Shiva Murthy.—I am talking about promotion. This relates to recruitment.

Sri A. Lakshmi Sagar.—These are not matters that can be answered here with any sense of purposefulness.

ಶ್ರೀ ಕೆ. ಶಿವಮೂರ್ತಿ.—ನಾನು ಹೇಳತಕ್ಕದ್ದು ಪ್ರೊಮೋಷನ್ ಬಗ್ಗೆ ಅಲ್ಲ. ಕೆಲಸಕ್ಕೆ ತೆಗೆದುಕೊಂಡಿರುವವರ ಬಗ್ಗೆ ಹೇಳುತ್ತಿದ್ದೇನೆ. ಷಡ್ಯೂಲ್ಡ್ ಕ್ಯಾಸ್ಟಿಗೆ ರಿಸರ್ವ್ ಮಾಡಿದ್ದರೂ ಮೀಸಲಾತಿ ಪ್ರಕಾರ ಹುದ್ದೆಗಳನ್ನು ತುಂಬುವುದು ಬಿಟ್ಟು ವೈಸ್‌ಚಾನ್ಸಲರ್ ಅವರ ಸಂಬಂಧಿಕರನ್ನು ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ನಾನು ಹೇಳುತ್ತಿದ್ದೇನೆ ಈ ಬಗ್ಗೆ ನನ್ನ ಹತ್ತಿರ ಪುರಾವೆಗಳಿವೆ. ಅಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ. ನಾನು ಬೇಡಿಕೆ ಮೇಲೆ ಚರ್ಚೆ ಮಾಡುವಾಗಲೂ ಈ ವಿಷಯ ಹೇಳಿದ್ದೇನೆ. ಸಾಯಿಲ್ ಸೈನ್ಸ್‌ನಲ್ಲಿ ಲೆಕ್ಚರರ್ ಪೋಸ್ಟಿಗೆ ಕ್ವಾಲಿಫೈಡ್ ಆಗಿರುವ ಅಭ್ಯರ್ಥಿ ಇದ್ದರೂ ಒಂದೇ ತಿಂಗಳಿಗೆ ಬಾದಿತ್ತರೂ ಅದನ್ನು ರಿಜೆಕ್ಟ್ ಮಾಡಿದ್ದಾರೆ. ಈ ಅವ್ಯವಹಾರದ ಬಗ್ಗೆ ಅಲ್ಲಿರತಕ್ಕವರು ನಮಗೆ ಪುರಾವೆಗಳನ್ನು ಕೊಟ್ಟಿದ್ದಾರೆ. ಅಲ್ಲಿ ವೈಸ್‌ಚಾನ್ಸಲರ್ ಹಣಿದ್ದಾರೆ he thinks the UAS is a breath for all his relatives. ಷಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ನವರಿಗೆ ಮೀಸಲಾಗಿರತಕ್ಕ ಹುದ್ದೆಗೆ ಅಡ್ವರ್ಟೈಸ್ ಮಾಡದೆ ಹೇಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ? ನಿಯಮದ ಪ್ರಕಾರ ಅಡ್ವರ್ಟೈಸ್ ಮಾಡಬೇಕು. ಈ ಸಿಂಗ್ಲಾಚಾರ್, ಪೃಥ್ವಿರಾಜ್ ಮತ್ತು ಜಗದೀಶ್ ಯಾರು ? ಷೆಡ್ಯೂಲ್ಡ್ ಕ್ಯಾಸ್ಟ್ ಕ್ಯಾಟಗರಿಯಲ್ಲಿ ಬರುತ್ತಾರಾ ? ಇದರ ಬಗ್ಗೆ ತನಿಖೆಯಾಗಬೇಕು. ಅಡ್ವರ್ಟೈಸ್ ಮಾಡದೆ ಯಾವ ರೀತಿ ತೆಗೆದುಕೊಂಡರು ? ಪಿ.ಎಚ್.ಡಿ. ಮಾಡಿರುವ ಕ್ವಾಲಿಫೈಡ್ ಕ್ಯಾಂಡಿಡೇಟ್ಸ್ ಇದ್ದರೂ ಅವರ ಅರ್ಜಿಯನ್ನು ಯಾವ ಕಾರಣದಿಂದ ರಿಜೆಕ್ಟ್ ಮಾಡಿದ್ದಾರೆ ? ಈ ಬಗ್ಗೆ ಸರ್ಕಾರದ ಗಮನಪನ್ನು ಸೆಳೆಯಬಯಸುತ್ತೇನೆ.